## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.

## ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 38/2018

**ಚಾ.ಸಾ. :-02**
**ಪ್ರಾ.ಸಾ. :-10**

| | |
|---|---|
| ಹೆಸರು | : ಆಕಾಶ್ |
| ತಂದೆಯ ಹೆಸರು | : ಲೇಟ್ ಸಿದ್ದರಾಜು |
| ವಯಸ್ಸು | : 37 ವರ್ಷ |
| ಉದ್ಯೋಗ | : ಖಾಸಗೀ ಬ್ಯಾಂಕ್ ಉದ್ಯೋಗಿ |
| ವಾಸಸ್ಥಳ | : ಕಳಸ್ತವಾಡಿ, ಮೈಸೂರು |

**ಪ್ರಮಾಣೀಕರಿಸಲಾದ ದಿನಾಂಕಃ- 01.12.2025**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>**

ಮೃತ ಪುಟ್ಟಸಿದ್ದಮ್ಮ ನಮ್ಮ ಗ್ರಾಮದವರು. ಚಾ.ಸಾ-3 ನನ್ನ ಸ್ನೇಹಿತ. ದಿನಾಂಕಃ 15.01.2018 ರಂದು ನಾನು ಮತ್ತು ಚಾ.ಸಾ-3 ರವರು ಲಕ್ಷದೀಪ ಉತ್ಸವ ನೋಡಲು ಶ್ರೀರಂಗಪಟ್ಟಣಕ್ಕೆ ಬರುತ್ತಿದ್ದೆವು. ಸಮಯ ಸುಮಾರು ರಾತ್ರಿ 7.20 ರಲ್ಲಿ ಸಾಯಿಬಾಬಾ ಆಶ್ರಮದ ಬಳಿ ಪುಟ್ಟಸಿದ್ದಮ್ಮ ಹಾಗೂ ಅವರ ಗಂಡ ದ್ವಿಚಕ್ರ ವಾಹನದಲ್ಲಿ ಎಡಭಾಗದಲ್ಲಿ ಹೋಗುತ್ತಿದ್ದರು. ನಾವು ನಮ್ಮ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆವು. ಆ ಸಮಯದಲ್ಲಿ KSRTC Bus ವೇಗವಾಗಿ ಬಂದು ಪುಟ್ಟಸಿದ್ದಮ್ಮರವರು ಹೋಗುತ್ತಿದ್ದ ದ್ವಿಚಕ್ರ ವಾಹನಕ್ಕೆ ಗುದ್ದಿರುತ್ತದೆ. ಆಗ ಬೈಕ್ ಚಾಲಕ ಮರಿಯಯ್ಯರವರು ವಾಹನದ ಎಡಭಾಗಕ್ಕೆ ಬಿದ್ದಿರುತ್ತಾರೆ ಹಾಗೂ ಪುಟ್ಟಸಿದ್ದಮ್ಮರವರು ವಾಹನದ ಬಲಭಾಗಕ್ಕೆ ಬಿದ್ದಿದ್ದು ಅವರ ಮೇಲೆ ಬಸ್ಸಿನ ಚಕ್ರ ಹರಿದಿರುತ್ತದೆ, ಅವರು ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಚಾ.ಸಾ-1 ರವರು ಸುಮಾರು 30-40 ಕಿ.ಮೀ.ವೇಗದಲ್ಲಿ ಚಾಲನೆ

ಮಾಡುತ್ತಿದ್ದರು. KSRTC Bus ಸುಮಾರು 80 ಕಿ.ಮೀ.ವೇಗದಲ್ಲಿ ಬರುತ್ತಿತ್ತು. ಅಪಘಾತ ಸ್ಥಳದಿಂದ ನಾವು ಸುಮಾರು 20 ಅಡಿ ದೂರದಲ್ಲಿದ್ದೆವು, ಹತ್ತಿರ ಹೋಗಿ ನೋಡಿದಾಗ ಚಾ.ಸಾ-1 ರವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಅವರನ್ನು ಆಸ್ಪತ್ರೆಗೆ ಕಳುಹಿಸಿರುತ್ತೇವೆ ಹಾಗೂ ಮೃತರನ್ನು ಶವಗಾರಕ್ಕೆ ಕಳುಹಿಸಿರುತ್ತೇವೆ. KSRTC Bus ಚಾಲಕ ಮೊದಲು ವಾಹನವನ್ನು ನಿಧಾನ ಮಾಡಿರುತ್ತಾರೆ, ಆದರೆ ನಂತರದಲ್ಲಿ ಸ್ಥಳದಿಂಂದ ಹೊರಟು ಹೋಗಿರುತ್ತಾರೆ.

ನಂತರ ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿ ಇರುವ ದಾಖಲೆಯು ಸ್ಥಳ ಮಹಜರ್ ಆಗಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಅಪಘಾತ ಸ್ಥಳದಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಗೆ ಸಹಿ ಮಾಡುವಾಗ ನನ್ನ ಸಮಕ್ಷಮ ಪೊಲೀಸರು ಅಪಘಾತಕ್ಕೆ ಸಂಬಂಧಿಸಿದಂತೆ ದ್ವಿಚಕ್ರ ವಾಹನವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನಾನು ಬ್ಯಾಂಕ್ ಸಿಬ್ಬಂದಿ ಹಾಗೂ ನನಗೆ ವಾಚ್ ಧರಿಸುವ ಅಭ್ಯಾಸವಿರುತ್ತದೆ ಎಂದರೆ ಸರಿ. ನನ್ನ ಸ್ನೇಹಿತ ಚಾ.ಸಾ-3 ರವರು ನನಗೆ ಸುಮಾರು 7.00 ಗಂಟೆ ಸಮಯದಲ್ಲಿ ದೂರವಾಣಿ ಕರೆ ಮಾಡಿರುತ್ತಾರೆ. ಚಾ.ಸಾ-3 ರವರ ಊರಾದ ಪಾಲಹಳ್ಳಿಯಿಂದ ಶ್ರೀರಂಗಪಟ್ಟಣಕ್ಕೆ ಬರಲು ಸುಮಾರು ಅರ್ಧ ಗಂಟೆ ಬೇಕಾಗುತ್ತದೆ ಎಂದರೆ ಸಾಕ್ಷಿ ಚಾ.ಸಾ-3 ರವರು ಕರೆ ಮಾಡಿದಾಗ ನಾನು ಕಳಸ್ತವಾಡಿ ಬಸ್ ನಿಲ್ದಾಣದ ಬಳಿ ಇದ್ದೆ ಹಾಗೂ ಚಾ.ಸಾ-3 ರವರು ಸಿದ್ದಲಿಂಗಪುರದ ಬಳಿ ಇದ್ದರು ಎನ್ನುತ್ತಾರೆ. ಚಾ.ಸಾ-3 ರವರು ಅವರ ಸಾಕ್ಷ್ಯದಲ್ಲಿ ಪಾಲಹಳ್ಳಿಯಿಂದ ಕಳಸ್ತವಾಡಿಗೆ ಬಂದಿರುವುದಾಗಿ ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**2.** ಆ ದಿನ ಲಕ್ಷದೀಪೋತ್ಸವ ಹಾಗೂ ಸಂಕ್ರಾಂತಿ ಇದ್ದ ಕಾರಣ ಕಳಸ್ತವಾಡಿ, ಸಿದ್ದಲಿಂಗಪುರ ಹಾಗೂ ಇತ್ಯಾದಿ ಗ್ರಾಮಗಳಲ್ಲಿ ದನಗಳಿಗೆ ಕಿಚ್ಚು ಹಾಯಿಸಲು ರಸ್ತೆಗೆ ಹುಲ್ಲನ್ನು ಹಾಕುತ್ತಾರೆ ಎಂದರೆ ಸರಿ. ರಸ್ತೆಯ ಒಂದು ಬದಿಯಲ್ಲಿ ಹುಲ್ಲು ಇದ್ದು, ಇನ್ನೊಂದು ಬದಿಯಲ್ಲಿ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ರಸ್ತೆಯು 4 ಪಥದ ಹೆದ್ದಾರಿ ಎಂದರೆ ಸರಿ. ಒಂದು ಪಥದಲ್ಲಿ 2 ವಾಹನಗಳು ಹೋಗಬಹುದು. ಹಬ್ಬದ ಸಮಯದಲ್ಲಿ ಒಂದು ಬದಿಯಲ್ಲಿ ಹುಲ್ಲು ಹಾಕಿದ ಕಾರಣ ಗ್ರಾಮಗಳು ಇರುವ ಜಾಗದಲ್ಲಿ ವಾಹನಗಳು ಹೋಗಲು ಆಗದೇ ಡಿವೈಡರ್ ನ ಇನ್ನೊಂದು ಬದಿಯಲ್ಲಿ ಎರಡೂ ಕಡೆಯ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಆ ದಿನ ಶ್ರೀರಂಗಪಟ್ಟಣದ ಎಲ್ಲಾ ದೇವಸ್ಥಾನಗಳಲ್ಲಿ ದೀಪೋತ್ಸವ ಇರುತ್ತದೆ. ಆ ದಿನ ಪಶ್ಚಿಮ ವಾಹಿನಿಯಲ್ಲಿರುವ ದೇವಸ್ಥಾನಗಳು ಹಾಗೂ ಸಾಯಿ ಬಾಬಾ ದೇವಸ್ಥಾನದಲ್ಲಿ ದೀಪೋತ್ಸವ ಇರುತ್ತದೆ. ಆ ಸಮಯದಲ್ಲಿ ಅಕ್ಕಪಕ್ಕದ ಗ್ರಾಮಸ್ಥರು ಸದರಿ ರಸ್ತೆಯ ಎಡಭಾಗದಲ್ಲಿ ಓಡಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**3.** ಹಬ್ಬದ ಸಮಯದಲ್ಲಿ ಪ್ರತಿ ಗ್ರಾಮಕ್ಕೂ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿರುತ್ತಾರೆ ಎಂದರೆ ಸರಿ. ಶ್ರೀರಂಗಪಟ್ಟಣದ ಚೆಕ್‌ಪೋಸ್ಟ್ ಬಳಿ ಪೊಲೀಸ್ ಸಿಬ್ಬಂದಿ ಇರುತ್ತಾರೆ ಎಂದರೆ ಸರಿ. ಸಾಯಿಬಾಬಾ ದೇವಸ್ಥಾನ ಚೆಕ್‌ಪೋಸ್ಟ್ ನಿಂದ ಸುಮಾರು 10 ಅಡಿ ದೂರ ಎಂದರೆ ಸಾಕ್ಷಿ 200-300 ಮೀ. ದೂರ ಎನ್ನುತ್ತಾರೆ. ಸದರಿ ದೇವಸ್ಥಾನ ಹೊಳೆಯ ಪಕ್ಕ ಇರುತ್ತದೆ ಎಂದರೆ ಸರಿ. ಆ ದಿನ ವಾಹನ ಸಂಚಾರ ಹೆಚ್ಚು ಇತ್ತು ಎಂದರೆ ಸಾಕ್ಷಿ ಸಾಮಾನ್ಯವಾಗಿತ್ತು ಎನ್ನುತ್ತಾರೆ. ಆ ಸಮಯದಲ್ಲಿ 6 ಗಂಟೆಗೆ ಕತ್ತಲಾಗುತ್ತದೆ ಎಂದರೆ ಸಾಕ್ಷಿ 7 ಗಂಟೆಗೆ ಆಗುತ್ತದೆ ಎನ್ನುತ್ತಾರೆ. ಕತ್ತಲಾದ ನಂತರದಲ್ಲಿ ಕಿಚ್ಚನ್ನು ಹಚ್ಚುತ್ತಾರೆ ಎಂದರೆ ಸಾಕ್ಷಿ ಒಂದೊಂದು ವರ್ಷ ಒಂದೊಂದು ರೀತಿ ಮಾಡುತ್ತಾರೆ ಎನ್ನುತ್ತಾರೆ. ಕತ್ತಲಾದ ನಂತರದಲ್ಲಿ ಕಿಚ್ಚನ್ನು ಹಚ್ಚುತ್ತಾರೆ ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**4.** ನನ್ನ ಬ್ಯಾಂಕ್ ಕೆಲಸ ಬೆಳಿಗ್ಗೆ 9.30 ರಿಂದ ಸಂಜೆ 6.00 ರವರೆಗೆ ಇರುತ್ತದೆ. ಮೈಸೂರಿನ ಅರಸು ರಸ್ತೆಯಲ್ಲಿ ನನ್ನ ಬ್ಯಾಂಕ್ ಇತ್ತು. ಅರಸು ರಸ್ತೆಯಿಂದ ಸಿದ್ದಲಿಂಗಪುರದಲ್ಲಿರುವ ನನ್ನ ಮನೆಗೆ ಸುಮಾರು 8-9 ಕಿ.ಮೀ. ದೂರು ಇರುತ್ತದೆ. ನಗರವಾದ ಕಾರಣ ಹಲವಾರು ಟ್ರಾಫಿಕ್ ಸಿಗ್ನಲ್ ಗಳು ಇರುತ್ತವೆ ಎಂದರೆ ಸರಿ. ಬ್ಯಾಂಕಿನಿಂದ ಮನೆಗೆ ಬರಲು 1 ಗಂಟೆ ಬೇಕಾಗಬಹುದು ಎಂದರೆ ಸಾಕ್ಷಿ 20 ನಿಮಿಷ ಸಾಕು ಎನ್ನುತ್ತಾರೆ. ಅ ದಿನ ನನ್ನ ಬೈಕಿನಲ್ಲಿಯೇ ಹೋಗುತ್ತಿದ್ದೆವು. ಕತ್ತಲೆಯಾದ ಕಾರಣ ಎದುರುನಿಂದ ಬರುತ್ತಿದ್ದ ವಾಹನಗಳ ಬೆಳಕು ಕಣ್ಣಿಗೆ ಬೀಳುತ್ತದೆ ಎಂದರೆ ಸಾಕ್ಷಿ ಎದುರಿನಿಂದ ಬರುವ ವಾಹನಗಳು ಬೇರೆ ಕಡೆ ಹೋಗುತ್ತವೆ ಎನ್ನುತ್ತಾರೆ.

**5.** ಚಾ.ಸಾ-1 ಮತ್ತು ನಮ್ಮ ವಾಹನದ ನಡುವೆ ಬೇರೆ ಯಾವ ವಾಹನಗಳು ಹೋಗುತ್ತಿದ್ದವು ಎಂದರೆ ಸಾಕ್ಷಿ ಒಂದು ಕಾರು ಹೋಗಿರುತ್ತದೆ ಎನ್ನುತ್ತಾರೆ. ಹಿಂದೆ ಬರುವ ವಾಹನಗಳು ಎಷ್ಟು ವೇಗದಲ್ಲಿ ಬರುತ್ತವೆ ಎಂದು ಗೊತ್ತಾಗುವುದಿಲ್ಲ ಎಂದರೆ ಸಾಕ್ಷಿ ನಮ್ಮ ಪಕ್ಕದಲ್ಲಿ ಹೋದಾಗ ಗೊತ್ತಾಗುತ್ತದೆ ಎನ್ನುತ್ತಾರೆ. ಆ ದಿನ ಹಬ್ಬ ಇದ್ದ ಕಾರಣ ಎಲ್ಲಾ ವಾಹನಗಳು ನಿಧಾನವಾಗಿ ಹೋಗುತ್ತಿದ್ದವು ಎಂದರೆ ಸರಿಯಲ್ಲ. ನಾವು ಹೇಳಿದಂತೆ ಘಟನೆ ನಡೆದಿದ್ದರೆ ಪೊಲೀಸರು ಹಾಗೂ ಸಾರ್ವಜನಿಕರು ಸ್ಥಳದಲ್ಲಿ ಇದ್ದ ಕಾರಣ ಸದರಿ ಬಸ್ಸನ್ನು ತಡೆದು ನಿಲ್ಲಿಸುತ್ತಿದ್ದರು, ಮುಂದೆ ಹೋಗಲು ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಸ್ಸಿಗೆ ಅಳವಡಿಸಿರುವ ಜಿ.ಪಿ.ಎಸ್.ಪ್ರಕಾರ ಸದರಿ ಬಸ್ ರಾತ್ರಿ 7.20 ಕ್ಕೆ ಅಪಘಾತ ಸ್ಥಳದಿಂದ ಸುಮಾರು 25 ಕಿ.ಮೀ. ಮುಂಭಾಗದಲ್ಲಿರುವ ಟಿ.ಎಂ.ಹೊಸೂರು ಬಳಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಟಿ.ಎಂ.ಹೊಸೂರಿಗೂ ಮುಂಚೆ ಸದರಿ ಬಸ್ ಶ್ರೀರಂಗಪಟ್ಟಣ ಬಸ್ ನಿಲ್ದಾಣಕ್ಕೆ ಹೋಗಿ ಸ್ವಲ್ಪ ಹೊತ್ತು ನಿಲ್ಲಿಸಿ ನಂತರ ಹೊರಟಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**6.** ಮಹಜರಿಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸುಳ್ಳು. ಬಸ್ಸಿನ ಮುಂಭಾಗ ಹಾಗೂ ಹಿಂಭಾಗದಲ್ಲಿ ಏನು ಬರೆದಿರುತ್ತದೆ ಎಂದು ಗೊತ್ತಿಲ್ಲ, ಅದು ಕೆಂಪು ಬಣ್ಣದ ಬಸ್ಸಾಗಿರುತ್ತದೆ. ಅಪಘಾತ ಸ್ಥಳದಲ್ಲಿ ನಾನು ಇರದೇ ಇದ್ದರೂ ಮೃತರು

ನಮ್ಮ ಗ್ರಾಮದವರಾದ ಕಾರಣ ಅವರ ಕುಟುಂಬಕ್ಕೆ ವಿಮೆ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬೇರೆ ಯಾವುದೋ ವಾಹನ ಅಪಘಾತ ಮಾಡಿದ್ದು, ಪರಿಹಾರ ಪಡೆಯುವ ಸಲುವಾಗಿ KSRTC Bus ಮೇಲೆ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದ್ವಿಚಕ್ರ ವಾಹನದ ಸಂಖ್ಯೆ ನೆನಪಿಲ್ಲ. ಬಸ್ಸಿನ ಸಂಖ್ಯೆ KA-40-F-1054 ಇರಬಹುದು.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**